# ನಿರುದ್ಯೋಗ ಎಂಬ ಪೆಡಂಭೂತ

ಬಿಇ, ಎಂಸಿಎ, ಬಿಎಡ್, ಎಂಎ, ಎಂಎಸ್ಸಿ ಶಿಕ್ಷಣ ಪಡೆದು ಕೇವಲ ನಾಲ್ಕೈದು ಸಾವಿರ ರೂ.ಗೆ ಕೆಲಸ ಮಾಡುವ ಅಸಂಖ್ಯಾತ ಯುವಕ ಯುವತಿಯರಿದ್ದಾರೆ. ಇವರಾರೂ ನಿರುದ್ಯೋಗಿಗಳ ವ್ಯಾಪ್ತಿಗೆ ಬಂದಿಲ್ಲ! ಸಮೀಕ್ಷೆಯು ಅಶಿಕ್ಷಿತರಲ್ಲಿ ನಿರುದ್ಯೋಗ ಪ್ರಮಾಣವನ್ನು ಕಡಿಮೆ ತೋರಿಸಿದೆ. ಹಾಗಾದರೆ ಶಿಕ್ಷಣ ಪಡೆಯದಿರುವುದೇ ಒಳ್ಳೆಯದೇ..?!

ಹಳ್ಳಿಗಳಲ್ಲಿ ಕೆಲಸ ಖಾಲಿ ಇಲ್ಲ! ಎಂದು ನಗರಕ್ಕೆ ವಲಸೆ ಬರುವವರ ಸಂಖ್ಯೆ ಕಳೆದ ದಶಕದಿಂದ ಹೆಚ್ಚಾಗಿದೆ. ಆದರೆ ನಗರಗಳಲ್ಲೇ ನಿರುದ್ಯೋಗಿಗಳ ಸಂಖ್ಯೆ ಹೆಚ್ಚು ಎಂದು ಸಮೀಕ್ಷೆಯೊಂದು ಹೇಳುತ್ತದೆ. ನೂರು ಗ್ರಾಮೀಣ ಯುವಕರಲ್ಲಿ ಇಬ್ಬರಿಗೆ ಉದ್ಯೋಗವಿಲ್ಲದಿದ್ದರೆ, ನಗರದಲ್ಲಿ ಈ ಪ್ರಮಾಣ ಐದು. ಗ್ರಾಮೀಣ ಯುವತಿಯರ ಪೈಕಿ ನೂರಕ್ಕೆ ಮೂವರು ನಿರುದ್ಯೋಗಿಗಳಾಗಿದ್ದರೆ, ನಗರದಲ್ಲಿ ಹದಿಮೂರು ಯುವತಿಯರಿಗೆ ಕೆಲಸ ಇಲ್ಲ. ಈ ಪ್ರಮಾಣ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ ಎಂದೂ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆ ನಡೆಸಿರುವ ಸಮೀಕ್ಷೆ ತಿಳಿಸುತ್ತದೆ.

ಕೇಂದ್ರ ಕಾರ್ಮಿಕ ಸಚಿವಾಲಯ ಹಾಗೂ ಉದ್ಯೋಗ ತರಬೇತಿ ಇಲಾಖೆಯು ಸಂಗ್ರಹಿಸಿರುವ ಉದ್ಯೋಗಿಗಳ ಅಂಕಿ ಅಂಶಗಳ ಆಧಾರದ ಮೇಲೆ ಈ ಸಮೀಕ್ಷೆ ನಡೆಸಲಾಗಿದೆ. ಅಶಿಕ್ಷಿತರಿಗಿಂತ ಶಿಕ್ಷಿತರಲ್ಲೇ ನಿರುದ್ಯೋಗ ಪ್ರಮಾಣ ಹೆಚ್ಚಾಗಿದೆ! ಶೇ.2ರಷ್ಟು ಅಶಿಕ್ಷಿತರು ಮಾತ್ರ ನಿರುದ್ಯೋಗಿಗಳಾಗಿದ್ದರೆ, ಶಿಕ್ಷಿತರಲ್ಲಿ ಈ ಪ್ರಮಾಣ ಕ್ರಮೇಣ ಹೆಚ್ಚುತ್ತ ಹೋಗುತ್ತಿದೆ. ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣ ಮತ್ತು ಪದವಿ ಪಡೆದ ಯುವಜನಾಂಗದಲ್ಲಿ ಕ್ರಮವಾಗಿ ಶೇ.3, ಶೇ.5 ಮತ್ತು ಶೇ.15ರ ಪ್ರಮಾಣದಲ್ಲಿ ನಿರುದ್ಯೋಗ ಇದೆ. ಐಟಿಐ ಶಿಕ್ಷಣ ಪಡೆದ ಗ್ರಾಮೀಣ ಯುವಕರಲ್ಲಿ ಶೇ.22ರಷ್ಟು ನಿರುದ್ಯೋಗಿಗಳಾಗಿದ್ದರೆ, ಯುವತಿಯರಲ್ಲಿ ಅರ್ಧಕ್ಕಿಂತ ಹೆಚ್ಚು ಅಂದರೆ ಶೇ.51ರಷ್ಟು ಮಂದಿಗೆ ಉದ್ಯೋಗ ಇಲ್ಲ. ನಗರದಲ್ಲಿ ಈ ಪ್ರಮಾಣ ಯುವಕರಲ್ಲಿ ಶೇ.17 ಮತ್ತು ಯುವತಿಯರಲ್ಲಿ ಶೇ.22.5ರಷ್ಟಿದೆ.

ಪದವಿ ಪಡೆದ ಗ್ರಾಮೀಣ ಯುವಕರಲ್ಲಿ ಶೇ.15ರಷ್ಟು, ನಗರದಲ್ಲಿ ಶೇ.13ರಷ್ಟು ಮಂದಿಗೆ ಉದ್ಯೋಗ ಇಲ್ಲ. ಪದವಿ ಪಡೆದ ಗ್ರಾಮೀಣ ಯುವತಿಯರ ಪೈಕಿ ಶೇ.28 ಮತ್ತು ನಗರದಲ್ಲಿ ಶೇ.25 ಮಂದಿಗೆ ಯಾವುದೇ ಹುದ್ದೆ ಇಲ್ಲ. ತಾಂತ್ರಿಕ ಶಿಕ್ಷಣ ಪಡೆದ ಎಲ್ಲರಿಗೂ ನೌಕರಿ ದೊರೆಯುತ್ತದೆ ಎಂಬ ಭ್ರಮೆ ಮಧ್ಯಮ ವರ್ಗದಲ್ಲಿ ಇದೆ. ಇಲ್ಲೂ ಗಮನಾರ್ಹ ಪ್ರಮಾಣದಲ್ಲಿ ಉದ್ಯೋಗ ದೊರೆಯುತ್ತಿಲ್ಲ. ಬಿ.ಇ., ಬಿ.ಟೆಕ್., ಪಾಲಿಟೆಕ್ನಿಕ್ ಮುಂತಾದ ತಾಂತ್ರಿಕ ಶಿಕ್ಷಣ ಪಡೆದವರ ಪೈಕಿ ಗ್ರಾಮೀಣ ಭಾಗದಲ್ಲಿ ಶೇ.15ರಷ್ಟು ಯುವಕರಿಗೆ ಹಾಗೂ ನಗರಗಳಲ್ಲಿ ಶೇ.7.2ರಷ್ಟು ಯುವಕರಿಗೆ ಉದ್ಯೋಗ ದೊರೆಯುತ್ತಿಲ್ಲ. ಮಹಿಳೆಯರ ಪೈಕಿ ನಗರದಲ್ಲಿ ಶೇ.17ರಷ್ಟು ಮಂದಿಗೆ ಉದ್ಯೋಗ ಇಲ್ಲ, ಗ್ರಾಮೀಣ ಭಾಗದಲ್ಲಿ ಶೇ.80ರಷ್ಟು ಯುವತಿಯರಿಗೆ ಉದ್ಯೋಗ ಇಲ್ಲ ಅಥವಾ ಅವರಲ್ಲಿ ಕೆಲವರು ಕೆಲಸಕ್ಕೆ ಹೋಗಲು ಮನಸ್ಸು ಮಾಡುತ್ತಿಲ್ಲ.

15ರಿಂದ 29ವರ್ಷ ವಯೋಮಿತಿಯ ಕೆಲವು ಸ್ಯಾಂಪಲ್‌ಗಳನ್ನು ಆಧರಿಸಿ ಈ ಸಮೀಕ್ಷೆ ನಡೆಸಲಾಗಿದೆ. ಬಿಇ, ಎಂಸಿಎ, ಬಿಎಡ್, ಎಂಎ, ಎಂಎಸ್ಸಿ ಶಿಕ್ಷಣ ಪಡೆದು ಕೇವಲ ನಾಲ್ಕೈದು ಸಾವಿರ ರೂ.ಗೆ ಕೆಲಸ ಮಾಡುವ ಅಸಂಖ್ಯಾತ ಯುವಕ ಯುವತಿಯರಿದ್ದಾರೆ. ಇವರಾರೂ ನಿರುದ್ಯೋಗಿಗಳ ವ್ಯಾಪ್ತಿಗೆ ಬಂದಿಲ್ಲ! ಸಮೀಕ್ಷೆಯು ಅಶಿಕ್ಷಿತರಲ್ಲಿ ನಿರುದ್ಯೋಗ ಪ್ರಮಾಣವನ್ನು ಕಡಿಮೆ ತೋರಿಸಿದೆ. ಹಾಗಾದರೆ ಶಿಕ್ಷಣ ಪಡೆಯದಿರುವುದೇ ಒಳ್ಳೆಯದೇ..?! ಅಶಿಕ್ಷಿತರು ಯಾವುದಾದರೂ ಉದ್ಯೋಗದಲ್ಲಿ ತೊಡಗಿಸಿಕೊಂಡಿದ್ದಾರೆಂದರೆ ಅವರಿಗೆ ವರ್ಷಪೂರ್ತಿ ಕೆಲಸ ಇದೆ ಎಂದಲ್ಲ. ವರ್ಷಕ್ಕೆ ಮೂರು ತಿಂಗಳು ದುಡಿದವರೂ ಈ ನಿರುದ್ಯೋಗದ ವ್ಯಾಪ್ತಿಯಲ್ಲಿ ಬಂದಿಲ್ಲ! ವರ್ಷಪೂರ್ತಿ ತಮ್ಮ ದುಡಿಮೆಗೆ ತಕ್ಕ ಪ್ರತಿಫಲ ಪಡೆಯುವವರ ಸಂಖ್ಯೆ ಎಷ್ಟು ಎಂಬುದರ ಸಮಗ್ರ ಸಮೀಕ್ಷೆ ನಡೆಸುವ ವೈಜ್ಞಾನಿಕ ವಿಧಾನಗಳು ಇನ್ನೂ ಚಾಲ್ತಿಗೆ ಬಂದಿಲ್ಲ. ಹಾಗಾಗಿ ಈ ಸಮೀಕ್ಷೆ ಅಪೂರ್ಣ, ಅರ್ಧಸತ್ಯವನ್ನು ಮಾತ್ರ ಇದು ಹೇಳುತ್ತಿದೆ.

ಮಾಹಿತಿ ತಂತ್ರಜ್ಞಾನ ಉಜ್ವಲ ಭವಿಷ್ಯ ನೀಡಿರುವುದು ಕೆಲವರಿಗೆ ಮಾತ್ರ. ಎಂಜಿನಿಯರಿಂಗ್ ಪದವೀಧರರನ್ನು ಶೋಷಿಸುವ ಕಂಪೆನಿಗಳೇ ಇಂದು ಹೆಚ್ಚಾಗಿವೆ. ತಮ್ಮ ಮಕ್ಕಳು ಉನ್ನತ ಹುದ್ದೆಯಲ್ಲಿದ್ದಾರೆ ಎಂಬ ಪೊಳ್ಳನ್ನು ಹೇಳಿಕೊಳ್ಳುವ ಸ್ಥಿತಿಯನ್ನು ಇಂತಹ ಕೆಲವು ಕಂಪೆನಿಗಳು ಪಾಲಕರಿಗೆ ತಂದಿಕ್ಕಿವೆ. ಎಂಎ, ಎಂಎಸ್ಸಿ ಅಂತೂ ಸರಿಯೇ; ಬಿಎಡ್, ಡಿಎಡ್, ಬಿಇ ಮುಂತಾದ ಉದ್ಯೋಗ ಆಧಾರಿತ ಶಿಕ್ಷಣ ಪಡೆದವರೂ ಇಂದು ಕೆಲಸವಿಲ್ಲದೆ ಲಾಟರಿ ಹೊಡೆಯುವ ಸ್ಥಿತಿ ಇದೆ.

ಪದವಿ, ಡಿಪ್ಲೊಮಾ ಪಡೆದ ಅರ್ಹರು ಹೆಚ್ಚಿನ ಸಂಖ್ಯೆಯಲ್ಲೇ ಇರಲಿ– ಆಗಲೇ ಕಡಿಮೆ ವೇತನಕ್ಕೆ ದುಡಿಸಿಕೊಳ್ಳಬಹುದು ಎಂಬ 'ವ್ಯಾಪಾರಿ ನೀತಿ'ಯೇ ರಾಜ್ಯವನ್ನು, ದೇಶವನ್ನು ಆಳುತ್ತಿರುವಾಗ ನಿರುದ್ಯೋಗ ಸಮಸ್ಯೆಗೆ ಪರಿಹಾರ ಇದೆಯೇ?

■ ಗುಡಿಹಳ್ಳಿ ನಾಗರಾಜ



ಶಶಿಕಿರಣ್